(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೇ, ಅವಶ್ಯವಿರುವ ವಿದ್ಯಾರ್ಹತೆ ಇದ್ದಲ್ಲಿ ಅರಣ್ಯಶಾಸನದ ಪದವೀಧರರಿಗೆ ಅವಕಾಶ ನೀಡಲು ಪರಿಶೀಲಿಸಲಾಗುತ್ತದೆ ಎಂದು ಹೇಳಿದ್ದಾರೆ. ಈ ಉತ್ತರವನ್ನು ಹೇಳುತ್ತಾ ಜಿ.ವಿ.ಕೆ.ರಾವ್ ವರದಿಯ ಕಾರಣ, ವಲಯ ಅರಣ್ಯಾಧಿಕಾರಿಗಳ ಹುದ್ದೆಗೆ ಈ ಪದವೀಧರರುಗಳಿಗೆ ಮೀಸಲಿಡುವುದು ಸಾಧ್ಯವಿಲ್ಲವೆಂದು ಹೇಳಿದ್ದೀರಿ. ಒಂದು ಕಡೆ ಕನ್‌ಸಿಡರ್ ಮಾಡುತ್ತೇವೆಂದು ಹೇಳುತ್ತೀರಿ, ಇನ್ನೊಂದುಕಡೆ ಸಾಧ್ಯಲಿಲ್ಲವೆಂದು ಹೇಳುತ್ತೀರಿ. ಇದರಲ್ಲಿ ಯಾವುದು ಸರಿ ? ಎರಡನೆಯದು, ಯಾರನ್ನು ನೀವು ಈ ಹುದ್ದೆಗಳಿಗೆ ಆಯ್ಕೆ ಮಾಡುತ್ತೀರಿ ಅವರ ಆಯ್ಕೆಯಾದ ಮೇಲೆ, ಅವರನ್ನು ಸರ್ಕಾರದ ಖರ್ಚಿನಲ್ಲಿ ತರಬೇತಿಗಾಗಿ ಕಳುಹಿಸುತ್ತೀರಿ. ಸರ್ಕಾರದ ಖರ್ಚಿನಲ್ಲಿ ತರಬೇತಿ ನೀಡಿ, ಪದವೀಧರರನ್ನು ಮಾಡಿದ್ದೀರಿ. ಅವರಿಗೆ ಈ ಹುದ್ದೆಗಳನ್ನು ಮೀಸಲಿಡುವುದರಿಂದ, ನಿಮ್ಮ ಸರ್ಕಾರಕ್ಕೆ ದುಡ್ಡೂ ಉಳಿಯುತ್ತದೆ, ಅವರಿಗೆ ಉದ್ಯೋಗವೂ ಸಿಗುತ್ತದೆ. ಇದಕ್ಕೆ ಇರತಕ್ಕ ತೊಂದರೆ ಏನು?

ಶ್ರೀ ಎಂ.ಪಿ.ಕೇಶವಮೂರ್ತಿ :- ಇವರಿಗೆ ಪೂರ್ಣವಾಗಿ ಅಂದರೆ, ಬಿ.ಎಸ್.ಸಿ ಫಾರೆಸ್ಟ್ರಿಯವರಿಗೇ ಮೀಸಲಾತಿ ಇಟ್ಟಮೇಲೆ, ಬೇರೆ ವಿದ್ಯಾರ್ಥಿಗಳಿಗೆ ಅವಕಾಶ ಇರುವುದಿಲ್ಲ. ಇವರಿಗೆ ಮೀಸಲಾತಿ ಇಟ್ಟರೆ ಬೇರೆಯವರಿಗೆ ಅವಕಾಶ ಇಲ್ಲದಂತಾಗುತ್ತದೆ. ಬೇರೆಯವರು ಯಾರು ಬಿ.ಎಸ್.ಸಿ ಮಾಡಿದ್ದಾರೆ ಅವರ ಜೊತೆಯಲ್ಲಿ ಇವರೂ ಸ್ಪರ್ಧೆ ಮಾಡಲಿ ಎನ್ನುವ ಉದ್ದೇಶದಿಂದ ನಾವು ಈ ರೀತಿ ಮಾಡಿದ್ದೇವೆ. ಇದು, ಇದುವರೆಗೆ ಇರಲಿಲ್ಲ. ಈಗ ಹೊಸದಾಗಿ ಬಂದಿರುವುದರಿಂದ, ಇವರಿಗೆ ಆದ್ಯತೆ ಕೊಡಬೇಕೆಂದು ಸಂಬಂಧಪಟ್ಟ ನೇಮಕಾತಿಗೆ ತಿದ್ದುಪಡಿ ಮಾಡುವುದಕ್ಕೆ ಕಳುಹಿಸಿದ್ದೇವೆ. ಜಿ.ವಿ.ಕೆ.ರಾವ್ ವರದಿ ಎಂದರೆ, ನಾವು ಒಂದೇ ಮಾಡುವುದರಿಂದ, ಬೇರೆಯವರಿಗೆ ಅವಕಾಶ ಇರುವುದಿಲ್ಲ. ಇವರು ಪಾಸ್ ಆಗಲೀ, ಆಗದೇ ಇರಲಿ, ಅರ್ಹತೆ ಇರಲಿ, ಇಲ್ಲದೇ ಹೋಗಲಿ, ಇವರಿಗೆ ಅವಕಾಶ ಕೊಡಬೇಕಾಗುತ್ತದೆ. ಆದ್ದರಿಂದ ಹಾರ್ಟಿಕಲ್ಚರ್ ಮಾಡಿರತಕ್ಕವರಿಗೆ, ಸಿರಿಕಲ್ಚರ್ ಮಾಡಿರತಕ್ಕವರಿಗೆ ಕೂಡ ಅವಕಾಶ ಕೊಡಿ, ಬಿ.ಎಸ್.ಸಿ ಸೈನ್ಸ್ ಮಾಡಿರತಕ್ಕ ಬಯೋಲಜಿ ಅಥವಾ ಬಾಟ್ನಿ ಮಾಡಿರತಕ್ಕವರಿಗೂ ಕೊಡಿ ಎಂದರೆ, ಶಿಫಾರಸ್ ಮಾಡಿರುವ ಪ್ರಕಾರ, ಮೊದಲ ಆದ್ಯತೆಯನ್ನು ಫಾರೆಸ್ಟ್ರಿಯವರಿಗೆ ಕೊಟ್ಟು ಅನಂತರ ಉಳಿದಂಥವರಿಗೂ ಕೊಡತಕ್ಕ ಅವಕಾಶವನ್ನು ಕಲ್ಪಿಸಿದ್ದೇವೆ. ಇದುವರೆಗೂ ಈ ರೀತಿ ಇರಲಿಲ್ಲ. ಇದು ಈಗ ಹೊಸದಾಗಿ ಜಾರಿಗೆ ಬಂದಿರುವುದರಿಂದ, ಅವಕಾಶ ಕಲ್ಪಿಸುವುದಕ್ಕೆ ರೂಲ್ಸ್‌ಗೆ ತಿದ್ದುಪಡಿ ಮಾಡುತ್ತಿದ್ದೇವೆ.

ವಿಷಯ :- ವೃತ್ತಿ ಶಿಕ್ಷಣದ ನೌಕರರ ಸೇವೆಯ ಖಾಯಂ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 107(566)

ಶ್ರೀ ಬಿ.ಹೆಚ್.ಬನ್ನಿಕೋಡ್(ಹಿರೇಕೆರೂರ್)

ಮಾನ್ಯ ವಯಸ್ಕರ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವೃತ್ತಿ ಶಿಕ್ಷಣ ಪೂರ್ಣಾವಧಿ ಹಾಗೂ ಪೂರ್ಣ ವೇತನದ ನೌಕರರ ಸಂಖ್ಯೆ ಎಷ್ಟು;

ಆ) ಅವರನ್ನು ನೇಮಿಸಿಕೊಂಡು ಎಷ್ಟು ವರ್ಷಗಳಾದವು;

ಇ) ಸದರಿಯವರನ್ನು ಖಾಯಂಗೊಳಿಸಲು ಸರ್ಕಾರಕ್ಕೆ ಹೆಚ್ಚಿನ ಹಣಕಾಸಿನ ಹೊರೆ ಬೀಳುವುದಿಲ್ಲ ಎನ್ನುವುದನ್ನು ಸರ್ಕಾರವು ಗಮನಿಸಿದೆಯೇ;

ಈ) ವೃತ್ತಿ ಶಿಕ್ಷಣದ ಪೂರ್ಣಾವಧಿಯ ಹಾಗೂ ಸಂಚಿತ ವೇತನದ ನೌಕರರ ಸಂಖ್ಯೆ ಎಷ್ಟು;

ಉ) ಅವರನ್ನು ನೇಮಕ ಮಾಡಿಕೊಂಡು ಎಷ್ಟು ವರ್ಷಗಳಾದವು;

ಊ)ಸದರಿ ಸಂಚಿತ ವೇತನದ ಸಿಬ್ಬಂದಿಯನ್ನು ಖಾಯಂಗೊಳಿಸಲು ಸರ್ಕಾರದಲ್ಲಿ ಯೋಜನೆ ಏನಾದರೂ ಇದೆಯೇ;

ಋ) ವೃತ್ತಿ ಶಿಕ್ಷಣದ ಎಲ್ಲಾ ನೌಕರರನ್ನು ಖಾಯಂಗೊಳಿಸಲು ಸರ್ಕಾರ ವಿಧಾನ ಮಂಡಲದಲ್ಲಿ ಈ ಹಿಂಧೆ ಭರವಸೆ ನೀಡಿದ್ದನ್ನು ಗಮನಿಸಲಾಗಿದೆಯೇ;

ೠ) ಆ ಬಗ್ಗೆ ಸರ್ಕಾರ ತೆಗೆದುಕೊಂಡು ಕ್ರಮಗಳೇನು ಹಾಗೂ ಆ ವಿಷಯದ ಬಗ್ಗೆ ಸರ್ಕಾರದ ನೀತಿ ಮತ್ತು ನಿರ್ಣಯಗಳೇನು?

ಶ್ರೀ ಪ್ರಭಾಕರ ಎಸ್.ರಾಣೆ

(ವಯಸ್ಕರ ಶಿಕ್ಷಣ ರಾಜ್ಯ ಸಚಿವರು)

76

1978-1982ರ ಅವಧಿಯಲ್ಲಿ

ಹೆಚ್ಚಿನ ಹೊರೆ ಬೀಳುವುದು

76 ಮತ್ತು 73

1978-1982ರ ಅವಧಿಯಲ್ಲಿ

ಇಲ್ಲ

ಹೌದು. ಆದರೆ, ಇದು ತಾತ್ಕಾಲಿಕ ಇಲಾಖೆಯಾಗಿದ್ದು, ಯಾವುದೇ ಹುದ್ದೆಗಳನ್ನು ಸೃಷ್ಟಿಸಿಲ್ಲ. ಕೇಂದ್ರ ಸರ್ಕಾರದ ಅನುದಾನದ ಮೇಲೆ ನಡೆಯುತ್ತಿದೆ. ಆದ್ದರಿಂದ, ಈ ಇಲಾಖೆಯನ್ನು ಖಾಯಂಗೊಳಿಸುವುದಾಗಲೀ ಮತ್ತು ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವುದಾಗಲೀ ಸಾಧ್ಯವಿಲ್ಲ.

ಉದ್ಭವಿಸುವುದಿಲ್ಲ.

12.00 ಪಿ.ಎಂ

ಶ್ರೀ ಬಿ.ಹೆಚ್.ಬನ್ನಿಕೋಡ್: ಮಾನ್ಯ ಅಧ್ಯಕ್ಷರೇ, ಇಲ್ಲಿ ಕೊಟ್ಟಿರತಕ್ಕಂಥ ಉತ್ತರವನ್ನು ನೋಡಿದರೆ, ನಾನು ಕೇಳಿರತಕ್ಕಂಥ ಪ್ರಶ್ನೆ –ವೃತ್ತಿ ಶಿಕ್ಷಣ ಪೂರ್ಣ ಅವಧಿ ಮತ್ತು ಪೂರ್ಣ ವೇತನ ನೌಕರರ ಸಂಖ್ಯೆ ಎಷ್ಟು? ಮತ್ತೆ ಇದರಲ್ಲಿ ಖಾಯಂ ಮಾಡಲಿಕ್ಕೆ ಸರ್ಕಾರಕ್ಕೆ ಏನಾದರೂ ಹಣಕಾಸಿನ ತೊಂದರೆ ಇದೆಯೇ? ಮತ್ತು ಶಿಕ್ಷಣದ ಪೂರ್ಣಾವಧಿ ಮತ್ತು ಸಂಚಿತ ವೇತನ ನೌಕರರ ಸಂಖ್ಯೆ ಬಗ್ಗೆ ಕೇಳಿದಾಗ, ಹಾಗೂ ಈ ಹಿಂದೆ ಇದರ ಬಗ್ಗೆ ವಿಧಾನ ಮಂಡಲವು ಭರವಸೆಯು ನೀಡಿತ್ತೇ ಎಂದು ಕೇಳಿದ್ದಕ್ಕೆ 'ಹೌದು' ಎಂದು ಸಹಾ ಉತ್ತರದಲ್ಲಿ ಹೇಳಿದ್ದಾರೆ. ಆದರೆ ಈಗ ಅವರನ್ನು ಖಾಯಂಗೊಳಿಸಲಿಕ್ಕೆ ಸಾಧ್ಯವಿಲ್ಲವೆಂದು ಉತ್ತರ ಕೊಡುತ್ತಿದ್ದಾರೆ. ಈ ಹಿಂದೆ ಸದನದಲ್ಲಿ ಭರವಸೆ ಕೊಟ್ಟು ಇವರನ್ನು ಖಾಯಂ ಮಾಡುತ್ತೇವೆಂದು ಹೇಳಿರುವುದು ನಿಜವೆಂದು ಇವರ ಉತ್ತರದಲ್ಲಿ

ಒಪ್ಪುತ್ತಿದ್ದಾರೆ. ಮುಂದೆ ಉತ್ತರ ಕೊಡುತ್ತಾ ಇದು ಸಾಧ್ಯವಿಲ್ಲವೆಂದು ಹೇಳುವುದಾದರೆ ಸರ್ಕಾರ ತಾನು ಹೇಳಿದ್ದ ಮಾತಿನ ಮೇಲೆ ವಿಶ್ವಾಸ ಇದೆಯೇ? ತಾನು ಹೇಳಿದ್ದನ್ನೇ ಇವತ್ತು ಪುನಃ ಸಾಧ್ಯವಿಲ್ಲವೆಂದು ಹೇಳುತ್ತಿರುವುದರಿಂದ ಇವರಿಗೆ ಯಾವುದೇ ಕಾರ್ಯಕ್ರಮದಲ್ಲಿ ನಂಬಿಕೆ ಇಲ್ಲ. ಈಗಿನ ಮುಖ್ಯ ಮಂತ್ರಿಗಳು ಆಗ ಶಿಕ್ಷಣ ಮಂತ್ರಿಗಳಾಗಿದ್ದರು. ಇದು 11-3-92 ರಂದು ಅವರು ಹೇಳಿದಂಥ ಮಾತು. 10 ದಿನಗಳಲ್ಲಿ ಅವರನ್ನು ಖಾಯಂ ಮಾಡುವುದಕ್ಕೆ ನಾವು ಎಲ್ಲಾ ಏರ್ಪಾಡುಗಳನ್ನು ಮಾಡುತ್ತೇವೆಂದು ಆಂದಿನ ಶಿಕ್ಷಣ ಮಂತ್ರಿಗಳು ಹೇಳಿದ್ದರು. ಆದರೆ ಅದನ್ನು ಇವತ್ತು ಸಾಧ್ಯವಿಲ್ಲವೆಂದು ಹೇಳುತ್ತಿರುವುದರಿಂದ ನಾನು ಇದನ್ನು ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳ ಶಿಕ್ಷಕರಿಗಾಗಿ ಪೂರ್ಣಾವಧಿ ಮತ್ತು ಸಂಚಿತ ವೇತನದಲ್ಲಿ ಸೇವೆ ಸಲ್ಲಿಸುತ್ತಿರುವವರನ್ನು ಖಾಯಂಗೊಳಿಸಲು ನಿಯಮಗಳನ್ನು ರೂಪಿಸಿ 10 ದಿವಸಗಳಲ್ಲಿ ಸಚಿವ ಸಂಪುಟದ ಮುಂದಿಡಲಾಗುವುದೆಂದು ಆಂದಿನ ಶಿಕ್ಷಣ ಸಚಿವರಾದ ವೀರಪ್ಪಮೊಯಿಲಿಯವರು ವಿಧಾನ ಸಭೆಯಲ್ಲಿಹೇಳಿದ್ದಾರೆ. ಇಂದಿನ ಮುಖ್ಯಮಂತ್ರಿಗಳೇ ಆಂದಿನ ವಿದ್ಯಾ ಮಂತ್ರಿಗಳಾಗಿದ್ದರು. ಇವರುಗಳನ್ನು ಖಾಯಂಗೊಳಿಸುತ್ತೇವೆಂದು ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ರಾಜ್ಯದ ಜನರಿಗೆ ಕೊಟ್ಟಂಥ ಮಾತನ್ನು ಇವತ್ತು ತಿರುಗಿಸಿ ಹೇಳುತ್ತಿದ್ದಾರಲ್ಲಾ? ಇವರಿಗೆ ನಾವು ಏನಂಥ ಕರೆಯಬೇಕು? ಈ ಸರ್ಕಾರಕ್ಕೆ ಯಾವ ವಿಷಯದ ಮೇಲೆ ಕಳಕಳಿ ಇದೆ? ಯಾರ ಬಗ್ಗೆ ಚಿಂತನೆ ಇದೆ? ಇದರ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಅಧ್ಯಕ್ಷರು: ತಮಗೆ ಏನು ಆಗಬೇಕು ಹೇಳಿ.

ಶ್ರೀ ಬಿ.ಹೆಚ್.ಬನ್ನಿಕೋಡ್: ಅಧ್ಯಕ್ಷರೇ ಪೂರ್ಣ ವೇತನವನ್ನು ಕೊಡುತ್ತೇವೆಂದು ಅವರು ಒಪ್ಪಿದ್ದಾರೆ. ಅಂದಮೇಲೆ ಇವರನ್ನು ಖಾಯಂಗೊಳಿಸಲಿಕ್ಕೆ ತೊಂದರೆ ಏನು? 92 ಜನರು ಪೂರ್ಣಾವಧಿಯಲ್ಲಿ ಕೆಲಸ ಮಾಡುತ್ತಾರೆ- ಪೂರ್ಣ ವೇತನವನ್ನು ಕೊಡುತ್ತಾರೆ. ರೆಗ್ಯುಲರೈಸ್ ಮಾಡಲಿಕ್ಕೆ ಇವರಿಗೆ ಏನು ತೊಂದರೆಯಾಗಿದೆ? ಬೇರೆ ರಾಜ್ಯಗಳಲ್ಲಿ ರೆಗ್ಯುಲರೈಸ್ ಮಾಡಿದ್ದಾರೆ. ಅದನ್ನೆಲ್ಲಾ ಕನ್ಸಿಡರ್ ಮಾಡಿ ಮಾಡುತ್ತೇವೆಂದು ಹೇಳಿದ್ದರು. ಆದರೆ ಇವತ್ತು ಆಗುವುದಿಲ್ಲವೆಂದು ಹೇಳುತ್ತಿದ್ದಾರೆ. 1978ನೇ ಇಸವಿಯಿಂದ ಅವರನ್ನು ಖಾಯಂಗೊಳಿಸಲಿಲ್ಲವೆಂದರೆ ಅವರಿಗೆ ನೀವು ದ್ರೋಹ ಮಾಡುತ್ತಿದ್ದೀರಿ ಹಾಗೂ ಅನ್ಯಾಯ ಮಾಡುತ್ತಿದ್ದೀರಿ ಎಂದು ಹೇಳಬೇಕಾಗುತ್ತದೆ. ಅದ್ದರಿಂದ ಇದನ್ನು ಪುನರ್ ಪರಿಶೀಲನೆ ಮಾಡಿ ಅವರನ್ನು ಖಾಯಂಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪ್ರಭಾಕರ್ ಎಸ್.ರಾಣೆ: ಮಾನ್ಯ ಅಧ್ಯಕ್ಷರೇ, ನಮ್ಮ ಉತ್ತರ ಸ್ಪಷ್ಟವಾಗಿದೆ. ಇದರಲ್ಲಿ ಯಾವುದೇ ಅಪನಂಬಿಕೆ ಈ ಕಾರ್ಯಕ್ರಮದಲ್ಲಿ ಇಲ್ಲ. ಮೇಲಾಗಿ ಮಾನ್ಯ ಸದಸ್ಯರು ಹಿಂದೆ ಶಿಕ್ಷಣ ಮಂತ್ರಿಗಳು ಸದನದಲ್ಲಿ ಕೊಟ್ಟಿದ್ದಂಥ ಉತ್ತರವನ್ನು ಪ್ರಸ್ತಾಪಿಸಿದ್ದಾರೆ. ಅವರು ಹೇಳಿದ್ದು ನಿಜ. ಅದರ ಬಗ್ಗೆ ನಾವು ಹೌದು ಅಂಥ ಕೂಡಾ ಒಪ್ಪಿಕೊಂಡಿದ್ದೇವೆ. ಅದನ್ನು ಇಲ್ಲವೆಂದು ನಾವು ಹೇಳಿಲ್ಲ. ಕೊಟ್ಟಿದ್ದ ಉತ್ತರವನ್ನೂ ಇಲ್ಲವೆಂದು ಹೇಳಿ ನಾವು ಬೇರೆ ಏನಾದರೂ ಸಾಧನೆ ಮಾಡುವ ಹಾಗಿದ್ದರೆ ಅದು ಬೇರೆಯಾಗುತ್ತಿತ್ತು. ನಾವು ಒಪ್ಪಿಕೊಂಡಿರುವುದಕ್ಕೆ ನಮ್ಮ ಪ್ರಾಮಾಣಿಕತೆಯನ್ನು ತಾವು ಮೆಚ್ಚಬೇಕು. ಇಲ್ಲಿ ಪ್ರಶ್ನೆ ಉದ್ಭವವಾಗಿರುವುದು ಇಷ್ಟೆ; ಮಾನ್ಯ ಅಧ್ಯಕ್ಷರೆ , ವೃತ್ತಿ ಶಿಕ್ಷಣ ಇಲಾಖೆ ಇದೊಂದು ತಾತ್ಕಾಲಿಕವಾದಂಥ ಇಲಾಖೆ. ಕೇಂದ್ರ ಸರ್ಕಾರದ ಅನುದಾನದಿಂದ ಕೆಲವು ಸ್ಕೀಮುಗಳನ್ನು ನಡೆಸುವಂಥ ಒಂದು ಯೋಜನೆ ಮಾತ್ರವೇ ಹೊರತಾಗಿ, ಇದು ಖಾಯಂ ಆಗಿ ಇನ್ನೂವರೆಗೆ

ಮಾರ್ಪಾಡಾಗಿಲ್ಲ. ಮಾನ್ಯ ಸದಸ್ಯರು ಕೇವಲ 76 ಶಿಕ್ಷಕರ ಬಗ್ಗೆ ಹೆಚ್ಚಿನ ಒಂದು ಒತ್ತನ್ನು ಕೊಟ್ಟಿದ್ದಾರೆ. ಇವರಿಗೆ ಪೂರ್ಣ ವೇತನವನ್ನು ಕೊಡುತ್ತಿದ್ದೀರಿ, ಆದರೆ ಖಾಯಂಗೊಳಿಸಲಿಲ್ಲವೇಕೆ ಎಂದು ಅವರ ಪ್ರಶ್ನೆ. ಈಗ ಇಲಾಖೆಯಲ್ಲಿ 1978 ರಿಂದ ಈವರೆಗೆ ಸುಮಾರು 1000 ಪೋಸ್ಟ್‌ಗಳನ್ನು ನಾವು ಪ್ರಾರಂಭಿಸಿದ್ದೇವೆ. 1978 ರಿಂದ 1982ರ ಅವಧಿಯಲ್ಲಿ ನೇಮಿಸಿಕೊಂಡಿರುವಂಥ ಶಿಕ್ಷಕರಿಗೆ ಪೂರ್ಣ ವೇತನವನ್ನು ಕೊಡಲಾಗುತ್ತಿದೆ. ನಂತರ ನೇಮಕವಾದವರಿಗೆ ಅದು ಅನ್ವಯಿಸಿಲ್ಲ. ಈಗ ಸಂಚಿತ ವೇತನದಲ್ಲಿ ಕೆಲಸ ಮಾಡುವಂಥವರು ಮತ್ತು ಅರೆಕಾಲಿಕ ವೇತನದಲ್ಲಿ ಕೆಲಸ ಮಾಡುವಂಥವರು, ಇವರು ಇಬ್ಬರೂ ಕೂಡಿ ಸುಪ್ರೀಮ್ ಕೋರ್ಟ್‌ಗೆ ಹೋಗಿದ್ದಾರೆ. ಅವರ ಪ್ರಶ್ನೆ ಅಲ್ಲಿ ಇನ್ನೂ ವರೆಗೆ ಇತ್ಯರ್ಥವಾಗಿಲ್ಲ. ನಾವು ಇವತ್ತು ಕೇವಲ ಆ 76 ಜನರ ಬಗ್ಗೆ ಯಾವುದೇ ನಿರ್ಣಯವನ್ನು ತೆಗೆದುಕೊಂಡರೂ ಅದು ಆ ಜನರಿಗೂ ಸಹ ಅನ್ವಯವಾಗಬೇಕಾಗುತ್ತದೆ. ಆ ದೃಷ್ಟಿಯಿಂದ ಸುಪ್ರೀಮ್ ಕೋರ್ಟ್‌ನ ನಿರ್ಣಯ ಏನಾಗುತ್ತದೆಂದು ನಾವು ನೋಡಬೇಕಾಗುತ್ತದೆ. ಆ ನಿರ್ಣಯ ಬಂದ ತಕ್ಷಣ ಇದರ ಬಗ್ಗೆ ಏನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್.ಏಕಾಂತಯ್ಯ:ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳಲ್ಲಿ ನನ್ನ ವಿನಂತಿ ಇಷ್ಟೆ;ಸರ್ಕಾರಿ ಅನುದಾನಿತ ಹಾಗೂ ಅನುದಾನ ರಹಿತ ಕಾಲೇಜುಗಳಲ್ಲಿ ವಿವಿಧ ರೀತಿ ಶಿಕ್ಷಣ ಕೋರ್ಸ್‌ಗಳಲ್ಲಿ ಶಿಕ್ಷಕರಾಗಿ ಪೂರ್ಣಾವಧಿ ಮತ್ತು ಸಂಚಿತ ವೇತನದ ಮೇಲೆ ಸೇವೆ ಸಲ್ಲಿಸಿದವರನ್ನು ಖಾಯಂಗೊಳಿಸಲು ನೇಮಕಾತಿ ನಿಯಮಗಳನ್ನು ರೂಪಿಸಿ ಸಚಿವ ಸಂಪುಟದ ಒಪ್ಪಿಗೆಗಾಗಿ ಇಡಲಾಗಿತ್ತೇ? ನಾನು ಏತಕ್ಕೋಸ್ಕರ ಈ ಮಾತನ್ನು ಕೇಳುತ್ತಿದ್ದೇನೆಂದರೆ ಹಿಂದೆ ಒಂದು ಆಶ್ವಾಸನೆಯನ್ನು ಈ ಸರ್ಕಾರ ಕೊಟ್ಟಿದೆ. ಏನು ಆಶ್ವಾಸನೆ ಕೊಟ್ಟಿದೆ ಎಂದರೆ ಈ ಬಗ್ಗೆ ನೇಮಕಾತಿ ನಿಯಮಗಳನ್ನು ರೂಪಿಸಿ ಸಚಿವ ಸಂಪುಟದ ಒಪ್ಪಿಗೆಗೆ ಇಡಲಾಗುತ್ತದೆಂದು. 10 ದಿವಸದೊಳಗೆ ಅದನ್ನು ಇಡುತ್ತೇವೆ ಎನ್ನುವ ಮಾತನ್ನು ಹೇಳಲಾಗಿದೆ. ನಾನು ತಮ್ಮ ಮೂಲಕ ಮಂತ್ರಿಗಳನ್ನು ಕೇಳುತ್ತೇನೆ, ಈ ರೀತಿ ಏನು ಆಶ್ವಾಸನೆ ಕೊಡಲಾಗಿದೆಯೋ ಅದರ ಪ್ರಕಾರ ಸಚಿವ ಸಂಪುಟದ ಪರಿಶೀಲನೆಗಾಗಿ ಈ ನೇಮಕಾತಿ ನಿಯಮಗಳನ್ನು ರೂಪಿಸಿ ಇಡಲಾಗಿತ್ತೆ?

ಶ್ರೀ ಪ್ರಭಾಕರ್ ಎಸ್ ರಾಣೆ: ಇಲ್ಲ.

ಶ್ರೀ ಹೆಚ್. ಏಕಾಂತಯ್ಯ: ಇಲ್ಲವೆ? ಹಾಗಾದರೆ ಅಧ್ಯಕ್ಷರೇ, ಇದು ಮಂತ್ರಿಗಳಾಗಿ ಹೇಳತಕ್ಕಂಥ ಮಾತಲ್ಲ. ಒಂದು ಪಕ್ಷ ಮಂತ್ರಿಗಳು ಈ ಸದನಕ್ಕೆ ಆಶ್ವಾಸನೆ ಕೊಟ್ಟಿದ್ದರೆ ಈಗ ಕೊಟ್ಟಿರುವ ಉತ್ತರದಿಂದ ಈ ಸದನದ ಹಕ್ಕು ಚ್ಯುತಿಯಾಗಿದೆ. ನಾನು ಪ್ರತ್ಯೇಕವಾಗಿ ಅದನ್ನು ಕಳುಹಿಸುತ್ತೇನೆ. ಅದನ್ನು ತಾವು ಪರಿಶೀಲನೆ ಮಾಡಬಹುದು.

ಶ್ರೀ ಡಿ.ಬಿ.ಚಂದ್ರೇಗೌಡ: ಆಶ್ವಾಸನೆ ಕೊಟ್ಟವರು ಬೇರೆ ಯಾರೂ ಅಲ್ಲ. ಈಗಿನ ಮುಖ್ಯಮಂತ್ರಿಗಳು. 10 ದಿನದೊಳಗೆ ಮಾಡುತ್ತೇವೆಂದು ಅವಧಿ ಕೂಡಾ ಹೇಳಿದ್ದಾರೆ.

ಶ್ರೀ ಪ್ರಭಾಕರ್ ಎಸ್ ರಾಣೆ: ಮಾನ್ಯ ಸದಸ್ಯರು ಕೇಳಿರುವುದು ಅದನ್ನು ಸಚಿವ ಸಂಪುಟದ ಮುಂದೆ ತೆಗೆದುಕೊಂಡು ಹೋಗಲಾಗಿದೆಯೇ ಎಂದು ; ತಾವು ಕೇಳಿದ್ದು ಸಿ ಅಂಡ್ ಆರ್ ರೂಲ್‌ಗಳನ್ನು ಮಾಡಿ ಅದನ್ನು ಸಚಿವ ಸಂಪುಟದ ಮುಂದೆ ತೆಗೆದುಕೊಂಡು ಹೋಗಲಾಗಿದೆಯೇ ಎಂದು ಕೇಳಿರುವುದಕ್ಕೆ ನಾನು ಇಲ್ಲವೆಂದು ಹೇಳಿದ್ದೇನೆ. ಏಕೆಂದರೆ ಆ ಪ್ರಸ್ತಾವನೆ ಇನ್ನೂ ಬಂದಿಲ್ಲ. ಈಗ ಸಿ ಅಂಡ್ ಆರ್ ರೂಲ್ ಮಾಡುವ ಹಂತದಲ್ಲೇ ಇದೆ. ಅದರ ಬಗ್ಗೆ ಅನೇಕ ಆಕ್ಷೇಪಗಳು ಇವೆ, ತಾಂತ್ರಿಕ ತೊಡಕುಗಳು

ಇವೆ, ಅದನ್ನೆಲ್ಲಾ ಪರಿಶೀಲನೆ ಮಾಡಿಕೊಂಡು ಸಚಿವ ಸಂಪುಟದ ಮುಂದೆ ತರಬೇಕಾಗುತ್ತದೆ.

ಶ್ರೀ ಬಿ.ಹೆಚ್.ಬನ್ನಿಕೋಡ್: ಬೇರೆ ರಾಜ್ಯಗಳಲ್ಲಿ ಖಾಯಂ ಮಾಡಿರುವಾಗ ಅದನ್ನು ತಾವು ಪರಿಶೀಲನೆ ಮಾಡಿ ಏಕೆ ಮಾಡಬಾರದು?

ಶ್ರೀ ಪ್ರಭಾಕರ ಎಸ್ ರಾಣೆ:ಅಧ್ಯಕ್ಷರೇ, ಇದನ್ನು ನಾವು ಸಂಪೂರ್ಣವಾಗಿ ತಳ್ಳಿಹಾಕುತ್ತಿಲ್ಲ. ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಅನೇಕ ವರ್ಷಗಳಿಂದ ಏನು ಕಾರ್ಯ ನಿರ್ವಹಿಸುತ್ತಿದ್ದಾರೆ? ಇವರುಗಳ ಬಗ್ಗೆ ಸಂಪೂರ್ಣವಾದ ಸಹಾನುಭೂತಿ ಸರ್ಕಾರಕ್ಕಿದೆ. ಅದನ್ನು ಆದಷ್ಟು ಬೇಗನೆ ಪರಿಹಾರ ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ವಿಷಯ:- ಶಿವಮೊಗ್ಗ ಜಿಲ್ಲೆಯಲ್ಲಿನ ಉರ್ದು ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 108(454)

ಶ್ರೀ ಕರಿಯಣ್ಣ

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಉರ್ದು ಪ್ರಾಥಮಿಕ ಶಾಲೆ ಹಾಗೂ ಉರ್ದು ಪ್ರೌಢ ಶಾಲೆಗಳು ಇರುವುದು;

ಆ) ಈ ಎಲ್ಲಾ ಉರ್ದು ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ಉರ್ದು ಹಾಗೂ ಕನ್ನಡದ ಉಪಾಧ್ಯಾಯರುಗಳನ್ನು ನೇಮಕ ಮಾಡಲಾಗುವುದೇ;

ಇ) ಉರ್ದು ಉಪಾಧ್ಯಾಯರನ್ನು ಒಂದು ಪಕ್ಷ ನೇಮಕ ಮಾಡದಿದ್ದಲ್ಲಿ ಉರ್ದು ಶಾಲೆಗಳನ್ನು ಯಾವ ಉದ್ದೇಶಕ್ಕಾಗಿ ತೆರೆಯಲಾಗಿದೆ;

ಈ) ಮೇಲ್ಕಂಡ ಪ್ರಾಥಮಿಕ ಹಾಗೂ ಪ್ರೌಢ ಉರ್ದು ಶಾಲೆಗಳಿಗೆ ಖಾಯಂ ಉಪಾಧ್ಯಾಯರ ಹುದ್ದೆಗಳನ್ನು ಮಂಜೂರು ಮಾಡಲಾಗುವುದೇ?

ಶ್ರೀ ನಾಗಮ್ಮ ಸಿ.ಕೇಶವಮೂರ್ತಿ

(ಪ್ರಾಥಮಿಕ ಪ್ರೌಢ ಶಿಕ್ಷಣ ಸಚಿವರು)

ಉರ್ದು ಪ್ರಾಥಮಿಕ ಶಾಲೆಗಳು : 206

ಉರ್ದು ಪ್ರೌಢ ಶಾಲೆಗಳು : 01

ರಿಕ್ತ ಸ್ಥಾನಗಳಲ್ಲಿ ಶೀಘ್ರವಾಗಿ ನೇಮಕಾತಿ ಮಾಡಲಾಗುವುದು.

-ಮೇಲಿನಂತೆ-

ಹೌದು.

ಶ್ರೀ ಕರಿಯಣ್ಣ:ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಉರ್ದು ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಇದೆಯೆಂದು ಕೇಳಿದ್ದೆ. ಉತ್ತರದಲ್ಲಿ 206 ಉರ್ದು ಪ್ರಾಥಮಿಕ ಶಾಲೆಗಳು ಮತ್ತು ಒಂದೇ ಒಂದು ಉರ್ದು ಪ್ರೌಢ ಶಾಲೆ ಇದೆ ಎಂದು ಉತ್ತರ ಕೊಟ್ಟಿದ್ದಾರೆ. ಅವರ ಇಲಾಖೆಗೆ ಇದು ಅರ್ಥವಾಗಿದೆಯೋ ಅಥವಾ ಇಲ್ಲವೋ? ಶಿವಮೊಗ್ಗದಲ್ಲೂ ಉರ್ದು ಪ್ರೌಢ ಶಾಲೆ ಇದೆ, ಚೆನ್ನಗಿರಿಯಲ್ಲಿ ಉರ್ದು ಪ್ರೌಢ ಶಾಲೆಗಳು 3 ಇವೆ, ಹೊನ್ನಾಳಿಯಲ್ಲಿ ಉರ್ದು ಪ್ರೌಢ ಶಾಲೆ ಇದೆ. ಆದರೆ ಇಡೀ ಶಿವಮೊಗ್ಗ ಜಿಲ್ಲೆಯಲ್ಲಿ ಒಂದೇ ಒಂದು ಉರ್ದು ಪ್ರೌಢ ಶಾಲೆ ಇದೆ ಎಂದು ಉತ್ತರ